(2) Sri R. Ramaiah.—Sir I beg to move that the House agrees with the Report.

Mr. Speaker.—Report presented.

ಗಮನ ಸೆಳೆಯುವ ಸೂಚನೆ

(i) ವಿಷಯ : ಪ್ರವಾಸಿ ಟ್ಯಾಕ್ಸಿಗಳಿಗೆ ಪರವಾನಿಗೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ನಾನು ರೂಲ್ 38ರ ಪ್ರಕಾರ ನನ್ನ ಸೂಚನೆಯನ್ನು ಮಾನ್ಯ ಸಾರಿಗೆ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು).—ಸ್ವಾಮಿ ನಾನು ಈ ಕೆಳಕಂಡ ಹೇಳಿಕೆಯನ್ನು ಮಾಡಬಯಸುತ್ತೇನೆ.

1980ನೇ ಇಸವಿಗೆ ಮುನ್ನ ಪ್ರವಾಸಿ ಟ್ಯಾಕ್ಸಿಗಳಿಗೆ ಪರವಾನಿಗೆಗಳನ್ನು ನೀಡುವಾಗ ಆಸನ ಸಾಮರ್ಥ್ಯ 5+1= 6ಕ್ಕೆ ಮೀರದೆ ಇರುವ ವಾಹನಗಳಿಗೆ ಮಾತ್ರ ಪರವಾನಿಗೆ ನೀಡಲಾಗಿತ್ತು. ಆನಂತರ ಸರ್ಕಾರವು 6 ಜನ ಪ್ರಯಾಣ ಮಾಡುವ ಪ್ರವಾಸಿಗಳ ಹಾಗೂ ಸಾರ್ವಜನಿಕರ ಅವಶ್ಯಕತೆಯನ್ನು ಪೂರೈಸಲೋಸುಗ, ಮಹೇಂದ್ರ ಮತ್ತು ಮಹೇಂದ್ರ ಸ್ಕಾರ್ಪಿಯೋ ಜೀಪ್ ಮತ್ತು ಮೆಟಡಾರಗಳ ವಿನ್ಯಾಸದ ಆಸನೋದನೆಯ ನಂತರ 6+1=7 ಆಸನ ಸಾಮರ್ಥ್ಯವನ್ನೊಳಗೊಂಡ ಇಂತಹ ವಾಹನಗಳನ್ನು ಹೊಂದಾಯಿಸಲು ಅನುಮತಿ ನೀಡಲಾಯಿತು. ಈ ಟ್ಯಾಕ್ಸಿಗಳಿಗೆ ಪ್ರವಾಸಿ ಅಭಿವೃದ್ಧಿಗೊಳಿಸಲೂ ಪರವಾನಿಗೆಗಳನ್ನು ಸಹ ನೀಡಲಾಯಿತು.

ಈ ವಾಹನಗಳಿಗೆ ಪರವಾನಿಗೆಗಳನ್ನು ನೀಡಿದ ಕ್ಷಣದಿಂದಲೇ ಅವು ರಾಷ್ಟ್ರೀಕೃತ ಹೆದ್ದಾರಿಗಳಲ್ಲಿ ಓಡಾಡುತ್ತಾ, ಸ್ಥಳದಿಂದ ಸ್ಥಳಕ್ಕೆ ಸಾಮರ್ಥ್ಯ ಮೀರಿ ಪ್ರಯಾಣಿಕರನ್ನು ಕೊಂಡೊಯ್ಯುತ್ತಾ ಮಾರ್ಗ ಮಧ್ಯದಲ್ಲಿ ಪ್ರಯಾಣಿಕರನ್ನು ಹತ್ತಿಸುತ್ತಾ ಇಳಿಸುತ್ತಾ ಅವರಿಂದ ವೈಯುಕ್ತಿಕ ಪ್ರಯಾಣ ದರವನ್ನು ವಸೂಲಿ ಮಾಡಿ ಅವುಗಳಿಗೆ ಪರವಾನಿಗೆ ನೀಡಿದ ಉದ್ದೇಶವನ್ನೇ ಕಡೆಗಣಿಸಿ ಪರವಾನಿಗೆಯ ನಿಬಂಧನೆಗಳನ್ನು ಉಲ್ಲಂಘಿಸುತ್ತಿದ್ದಾರೆ. ಖಾಸಗಿ ಪ್ರವಾಸಿಗರ ಅವಶ್ಯಕತೆಯನ್ನು ಪೂರೈಸಲು ಈ ವಾಹನಗಳಿಗೆ ಪರವಾನಿಗೆ ನೀಡಿದ್ದೇ ಹೊರತು ಬಸ್ಸು ನಿಲ್ದಾಣ, ಸಾರ್ವಜನಿಕ ಹೆದ್ದಾರಿ ಮುಂತಾದ ಸ್ಥಳಗಳಲ್ಲಿ ನಿಲ್ಲಿಸಿ ಸ್ಥಳದಿಂದ ಸ್ಥಳಕ್ಕೆ ವೈಯುಕ್ತಿಕ ಪ್ರಯಾಣಿಕರನ್ನು ಒಯ್ದು ಅವರಿಂದ ಬಾಡಿಗೆ ದರವನ್ನು ವಸೂಲಿ ಮಾಡಲು ಅಲ್ಲ. ಈ ವಾಹನಗಳು ಮಜಲು ಗಾಡಿಗಳಾಗಿ (ಸ್ಟೇಜ್ ಕ್ಯಾರಿಯೇಜ್) ರಾಷ್ಟ್ರೀಕೃತ ಹೆದ್ದಾರಿಗಳಲ್ಲಿ ಕಾನೂನು ಬಾಹಿರವಾಗಿ ಓಡಾಡುತ್ತಿರುವುದರಿಂದ ಪ್ರಯಾಣಿಕರ ಜೀವಕ್ಕೆ ಅಪಾಯು ಒದಗುವುದಲ್ಲದೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಪಣಕಾಸಿನ ನಷ್ಟವನ್ನೊದಗಿಸುತ್ತಿವೆ.

ದಿನೇ ದಿನೇ ವೃದ್ಧಿಯಾಗುತ್ತಿರುವ ಇಂತಹ ವಾಹನಗಳ ಹಾವಳಿಯನ್ನು ತಪ್ಪಿಸಲು ಈ ಇಲಾಖೆಯ ತನಿಖಾಧಿಕಾರಿಗಳಿಗೆ ಸಾಮರ್ಥ್ಯ ಮೀರಿ ಪ್ರಯಾಣಿಕರನ್ನೊಯ್ಯುವುದು ಮತ್ತು ಕಾನೂನುಬಾಹಿರ ಪ್ರಕರಣಗಳ ಬಗ್ಗೆ ತೆನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಲು ಕೋರಿ ಆಜ್ಞೆ ನೀಡಲಾಗಿದೆ.

ಧಾರವಾಡ ಜಿಲ್ಲೆಯಲ್ಲಿ, ಪ್ರಾದೇಶಿಕ ಸಾರಿಗೆ ಅಧಿಕಾರಿ ವರ್ಗವು 6+1=7 ಆಸನ ಸಾಮರ್ಥ್ಯವಿರುವ 300 ಒಳ ರಾಜ್ಯ ಪರವಾನಿಗೆಗಳ ಸಂಖ್ಯೆಯನ್ನು ನಿರ್ಧರಿಸಿದ್ದು, ಅವುಗಳಲ್ಲಿ 71 ಪಕ್ಕಾ ಪರವಾನಿಗೆಗಳನ್ನು ಮೂರು ಅಥವಾ 5 ವರ್ಷಗಳಿಗೆ ಮಾನ್ಯತೆ ಪಡೆದಿರುವಂತೆಯೂ, ಹಾಗೂ ನಾಲ್ಕು ತಿಂಗಳ ಮಾನ್ಯತೆ ಪಡೆದಿರುವ 153 ತಾತ್ಕಾಲಿಕ ಪರವಾನಿಗೆಗಳನ್ನು ನೀಡಿದೆ. ಈ ಎಲ್ಲಾ ವಾಹನಗಳು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನಿಲ್ದಾಣದಲ್ಲಿ ನಿಂತು ಪ್ರಯಾಣಿಕರನ್ನು ಕೊಂಡೊಯ್ಯುತ್ತಾ, ರಾಜ್ಯ ಸಾರಿಗೆ ನಿಗಮಕ್ಕೆ ಪೈಪೋಟಿಯಾಗಿ ನಿಂತಿವೆ. ಧಾರವಾಡ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಇಂತಹ 350 ಪ್ರಕರಣಗಳನ್ನು ಗುರುತಿಸಿದ್ದು 38 ಪರವಾನಿಗೆಗಳನ್ನು ಅಮಾನತ್ತಿನಲ್ಲಿಟ್ಟಿದ್ದಾರೆ. ಗದಗ್ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು 10 ಪ್ರಕರಣಗಳನ್ನು ಹಿಡಿದು ಚಾಲಕರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದಾರೆ.

ಇಂತಹ ವಾಹನಗಳನ್ನು 6+1 =7 ಆಸನ ಸಾಮರ್ಥ್ಯದಂತೆ ಸೊಂದಾಯಿಸಿ ಅವುಗಳಿಗೆ ಪರವಾನಿಗೆ ನೀಡುವಾಗ ಅವುಗಳು ಮಾಲೀಕರು 6+1= 7 ಪ್ರಯಾಣಿಕರನ್ನೇ ಕೊಂಡೊಯ್ಯಬೇಕೆಂಬ ನಿಯಮಕ್ಕೆ ಒಪ್ಪಿ ಪರವಾನಿಗೆಯನ್ನು ಪಡೆಯುವುದರಿಂದ ಅವರಿಗೆ ನಿರ್ದಿಷ್ಟ ಸಾಮರ್ಥ್ಯಕ್ಕಿಂತ ಹೆಚ್ಚಿನ ಪ್ರಯಾಣಿಕರನ್ನೊಯ್ಯಲು ಯಾವುದೇ ಹಕ್ಕು ಇರುವುದಿಲ್ಲ. ಈ ವಾಹನಗಳಿಗೆ ಹೆಚ್ಚಿನ ಸಾಮರ್ಥ್ಯಕ್ಕೆ ಪರವಾನಿಗೆಯನ್ನು ಖಾಸಗಿಯವರಿಗೆ ನೀಡಲು ಕರ್ನಾಟಕ ಒಪ್ಪಂದ ವಾಹನ ಕಾಯಿದೆ 1976ರ ಪ್ರಕಾರ ಸಾಧ್ಯವಿಲ್ಲ. ಈ ಕಾರಣಗಳಿಂದ ಗದಗ್ ಸೇರಿದಂತೆ ಧಾರವಾಡ ಜಿಲ್ಲೆಯ ವ್ಯಾನ್ ಮಾಲೀಕರು ಮತ್ತು

ಚಾಲಕರು ನಡೆಸುತ್ತಿರುವ ಸತ್ಯಾಗ್ರಹವು ಕಾನೂನು ಬಾಹಿರವಾಗಿದೆ. ಈ ಸತ್ಯಾಗ್ರಹಕ್ಕೆ ಮೋಟಾರು ವಾಹನ ಇಲಾಖೆಯ ಕಾನೂನು ಉಲ್ಲಂಘನಾ ವಾಹನಗಳನ್ನು ತಪಾಸಣೆ ನಡೆಸಿ ಪ್ರಕರಣಗಳನ್ನು ದಾಖಲು ಮಾಡಿಕೊಂಡಿದ್ದು ಪ್ರಮುಖ ಕಾರಣವಾಗಿದೆ.

ಶ್ರೀ ಕೆ. ಪೆಚ್. ಪಾಟೀಲ್.—ವಾಹನಗಳನ್ನು ತಯಾರು ಮಾಡುವಾಗ ತಯಾರಕರು 16+7 ಆಸನಗಳಿರುವ ಕೆಲವು ವಾಹನಗಳನ್ನು ನಿರ್ಮಾಣ ಮಾಡಿದ್ದಾರೆ. ನಿರ್ಮಾಣ ಮಾಡಿದ ಮೇಲೆ ಅವನ್ನು ಕಳವು ಮಾಡುತ್ತಾರೆಂದು, ಕಳವು ಮಾಡಿದವರ ಕೈ ಕಡಿಯಬೇಕೆಂದು ಕಾನೂನು ಮಾಡುವುದು ಸರಿಯಲ್ಲ. ಅನೇಕ ವಾಹನಗಳು ಕಳವು ಆಗಿ ಹೋಗುವುದು ಮಂತ್ರಿಗಳಿಗೂ ಗೊತ್ತಾಗುತ್ತದೆ. ಆ ವಾಹನಗಳು ಸಣ್ಣದಾಗಿರುವುದರಿಂದ ಬೆಳಗಾಂಗೂ ಹೋಗುತ್ತವೆ ಬೀದರ್‌ಗೂ ಹೋಗುತ್ತವೆ. ಮಂತ್ರಿಗಳು ಬಡ ತನದಿಂದ ಬಂದವರು, ಗೌರವಾನ್ವಿತರು, ಬಡವರ ಕಷ್ಟನಷ್ಟಗಳನ್ನು ಅರಿತುಕೊಳ್ಳಬೇಕು, ಉದಾಹರಣೆಗೆ, ವಾಹನಗಳಿಂದ ಬೆಂಗಳೂರಿನಲ್ಲಿ ಎಷ್ಟು ಉತ್ಪನ್ನ ಬರುತ್ತದೆ, ಬೆಳಗಾಂನಲ್ಲಿ ಎಷ್ಟು ಉತ್ಪನ್ನ ಬರುತ್ತದೆಂದರೆ, ಬೆಳಗಾಂ ಡಿವಿಜನ್‌ನಲ್ಲೇ ಜಾಸ್ತಿ ಬರುತ್ತದೆ. ಅಲ್ಲಿನ ಕೆ.ಎಸ್.ಆರ್.ಟಿ.ಸಿ.ಯ ಉತ್ಪನ್ನ ಹೆಚ್ಚಾಗಿದೆ. ಅಲ್ಲಿ ಹಣ ಪೋಲಾಗುವುದು ಕಡಿಮೆ ಇದೆ. ಏಕೆಂದರೆ ಅಲ್ಲಿ ಹೆಚ್ಚು ಜನರಿಗೆ ಪಾಸ್ ಕೊಟ್ಟಿಲ್ಲ. ಕಾಂಟ್ರಾಕ್ಟ್ ಬಸ್ಸುಗಳಲ್ಲಿ 16 ಜನ ಹೋಗುವ ಜಾಗದಲ್ಲಿ 7 ಜನ ಮಾತ್ರ ಹೋಗುವುದರಿಂದ ಪೆಟ್ರೋಲು ವ್ಯಯವಾಗುತ್ತದೆ ಮತ್ತು ಸಾರ್ವಜನಿಕರ ಹಣ ಕೂಡ ವ್ಯಯವಾಗುತ್ತದೆ. ಇದನ್ನು ಮತ್ತೊಮ್ಮೆ ಪರಿಶೀಲನೆಮಾಡಿ ನಿಮ್ಮ ಅಪ್ಪಣೆ ಸರಿಯಾಗಿಲ್ಲವೆಂದರೆ ಅದನ್ನು ತಿದ್ದುಪಡಿ ಪಡಿಸುವುದಕ್ಕೆ ಗಮನಹರಿಸುತ್ತೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಅಧ್ಯಕ್ಷರೆ. ಸದಸ್ಯರು ಹೇಳಿರತಕ್ಕ ವಿಚಾರ ಏನಿದೆ ಅದನ್ನು ನಾನೂ ಸಹ ಒಪ್ಪುತ್ತೇನೆ. 6+1 ಒಟ್ಟು 7 ಜನರನ್ನು ಆ ವಾಹನಗಳಲ್ಲಿ ತೆಗೆದುಕೊಂಡು ಹೋಗಲು ಪರವಾನಗಿ ಕೊಟ್ಟಿದ್ದೇವೆ. ಕಾನೂನು ಪ್ರಕಾರ 7 ಜನರನ್ನು ತೆಗೆದುಕೊಂಡುಹೋಗಿ ನಾವು ಹಾಕಿರತಕ್ಕ ಟ್ಯಾಕ್ಸ್ ಕಟ್ಟಿ ಜೀವನ ನಡೆಸುವುದು ಕಷ್ಟವಾಗುತ್ತದೆ ಎಂಬ ಮಾತನ್ನು ನಾನೂ ಸಹ ಒಪ್ಪುತ್ತೇನೆ. ಆದರೆ ಪರಿಸ್ಥಿತಿ ಯಾವ ಮಟ್ಟಕ್ಕೆ ಮುಟ್ಟಿದೆ ಎಂದರೆ, ಟೂರಿಸ್ಟ್‌ಗಳನ್ನು ಮಾತ್ರ ಕರೆದುಕೊಂಡುಹೋಗಬೇಕು ಎಂದು ಹೇಳಿದ್ದರೂ ಅದೇರೀತಿ ಯಾರಾದರೂ ಮ್ಯಾನೇಜ್ ಪಾರ್ಟಿಯವರು ಇದ್ದರೆ ಅವರನ್ನು ಕರೆದುಕೊಂಡು ಹೋಗಬಹುದೆಂದು ಹೇಳಿದ್ದರೂ, ಆ ರೀತಿ ಅವರು ಮಾಡದೆ ಬಸ್ ಸ್ಟ್ಯಾಂಡ್‌ಗಳ ಪಕ್ಕದಲ್ಲಿ ನಿಂತು ಮೆಟಾಡಾರ್ ವ್ಯಾನಿನಲ್ಲಿ ಜನರನ್ನು ತುಂಬಿಕೊಂಡು ಹೋಗುತ್ತಿದ್ದಾರೆ. ಎರಡು ಮೂರು ವರ್ಷಗಳಿಂದ ವ್ಯಾನ್‌ಗಳವರು ಈ ರೀತಿ ನಡೆಸಿಕೊಂಡು ಹೋಗುತ್ತಿದ್ದರೂ ಯಾವುದೇ ತೊಂದರೆ ಇರಲಿಲ್ಲ. ಆದರೆ ಈಗ ಪರಿಸ್ಥಿತಿ ಯಾವ ಮಟ್ಟಕ್ಕೆ ಹೋಗಿದೆ ಎಂದರೆ, ಕೆಎಸ್‌ಆರ್‌ಟಿಸಿ. ಬಸ್ ಸ್ಟ್ಯಾಂಡ್ ಪಕ್ಕದಲ್ಲೇ ವ್ಯಾನ್ ತಂದು ನಿಲ್ಲಿಸಿ ಕೊಳ್ಳುತ್ತಾರೆ. ಮೆಟಡಾರ್ ತುಂಬಿದಮೇಲೆ ಇವರು ಸಿಗ್ನಲ್ ಕೊಡುತ್ತಾರೆ. ನಂತರ ಕೆಎಸ್‌ಆರ್‌ಟಿಸಿ. ಬಸ್ ಹೊರಡುತ್ತವೆ. ಇದರಿಂದ ನಮ್ಮ ಬಸ್ಸುಗಳು ಖಾಲಿ ಇರುತ್ತವೆ. ಹೀಗಾಗಿ ಕೆಎಸ್‌ಆರ್‌ಟಿಸಿ.ಗೆ ನಷ್ಟವಾಗಿದೆ. ಖಾಸಗಿ ವ್ಯಾನುಗಳ ಮೂವ್‌ಮೆಂಟನ್ನು ರೆಗ್ಯುಲೇಟ್ ಮಾಡಿರುವುದರಿಂದ ಒಂದು ದಿವಸಕ್ಕೆ ಕೆಎಸ್‌ಆರ್‌ಟಿಸಿ.ಗೆ 5 ಲಕ್ಷ ರೂಪಾಯಿಗಳಷ್ಟು ಹೆಚ್ಚಿಗೆ ಆದಾಯ ಬರುತ್ತಿದೆ. ಅಂದರೆ ತಿಂಗಳಿಗೆ ಒಂದೂವರೆ ಕೋಟಿ ರೂಪಾಯಿ ಆದಾಯ ಹೆಚ್ಚಾಗಿವೆ. ಈ ವ್ಯಾನ್‌ಗಳನ್ನು ಓಡಿಸುತ್ತಿರುವವರಲ್ಲಿ ಅನೇಕರು ನಿರುದ್ಯೋಗಿಗಳು, ಮಧ್ಯಮವರ್ಗದವರು ಎಂಬುದು ನನಗೂ ಗೊತ್ತು. ಅವರು ನ್ಯಾಷನಲೈಸ್ ರೂಟ್‌ಗಳನ್ನು ಬಿಟ್ಟು ಬೇರೆ ಕಡೆ ಓಡಿಸಿದರೆ ನಮ್ಮ ಅಭ್ಯಂತರ ಏನೂ ಇಲ್ಲ. ಬೆಂಗಳೂರು ಮತ್ತು ಮಂಡ್ಯ ಜಿಲ್ಲೆಯಲ್ಲಿ ನ್ಯಾಷನಲೈಸ್ ಆಗದೇ ಇರುವ ರೂಟುಗಳು ಇವೆ. ಅಲ್ಲಿಗೆ ಇವರು ಹೋಗುವುದಿಲ್ಲ. ಕೆಎಸ್‌ಆರ್‌ಟಿಸಿ. ಬಸ್ಸುಗಳು ಓಡಾಡುವ ಕಡೆಯೇ ಬರುತ್ತಿದ್ದಾರೆ, ಆದ್ದರಿಂದ ನಾವು ಹಾಲಿ ಇರತಕ್ಕ ಕಾನೂನನ್ನು ಕಾರ್ಯರೂಪಕ್ಕೆ ತರಲಿಕ್ಕೆ ಪ್ರಯತ್ನ ಮಾಡಿದ್ದೇವೆಯೇ ವಿನಹ ಮೆಟಾಡಾರ್ ವ್ಯಾನ್‌ನವರಿಗೆ ತೊಂದರೆ ಕೊಡಬೇಕು ಎಂಬ ಉದ್ದೇಶದಿಂದ ಏನೂ ಮಾಡಿಲ್ಲ. ವ್ಯಾನ್ ಇಟ್ಟುಕೊಂಡಿರುವವರಿಗೆ ಕೆಎಸ್‌ಎಫ್‌ಸಿ. ಯಿಂದ ಸಾಲ ಕೂಡ ಕೊಡಲಾಗಿದೆ. ಅವರನ್ನು ಹಾಳು ಮಾಡಬೇಕು, ಅವರಿಗೆ ತೊಂದರೆ ಕೊಡಬೇಕು ಎಂಬುದು ನಮ್ಮ ಉದ್ದೇಶವಲ್ಲ. ಸರ್ಕಾರದ ಮತ್ತೊಂದು ಸಂಸ್ಥೆಯಾಗಿರತಕ್ಕ ಕೆಎಸ್‌ಆರ್‌ಟಿಸಿ.ಯಲ್ಲಿ 6 ಸಾವಿರಕ್ಕೂ ಹೆಚ್ಚು ಬಸ್ಸುಗಳಿದ್ದು ಅದಕ್ಕೆ ಲುಕ್ಸಾನಾಗಬಾರದು ಎಂಬ ಉದ್ದೇಶದಿಂದ ಈ ಕ್ರಮ ಕೈಗೊಂಡಿದ್ದೇವೆ. ಖುನ್ಯ ಸದಸ್ಯರು ಅವರ ವಿಚಾರದಲ್ಲಿ ಹೇಳಿರತಕ್ಕ ಅಂಶಗಳು ಸತ್ಯವಾಗಿದೆ. ಅದನ್ನು ನಾನು ಒಪ್ಪುತ್ತೇನೆ. ಇನ್ನು ಒಂದು ವಾರ ಅಥವಾ ಹದಿನೈದು ದಿವಸಗಳಲ್ಲಿ ಸಂಬಂಧಪಟ್ಟವರನ್ನು ಕರೆಸಿ ಮಾತನಾಡಿ ಕಾನೂನಿನ ಪರಿಮಿತಿಯಲ್ಲಿ ಯಾವರೀತಿ ಅವರಿಗೆ ಸಹಾಯ ಮಾಡಬಹುದೋ ಅದನ್ನು ಮಾಡುತ್ತೇನೆ ಎಂಬ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಬುಗಾರಪ್ಪ.—ಅಧ್ಯಕ್ಷರೇ, ಇದರಲ್ಲಿ ಎರಡು ಪ್ರಶ್ನೆ ಇದೆ. ಮೊದಲನೆಯದು ಕೆಪಾಸಿಟಿಯನ್ನು 15 ಜನರಿಗೆ ಹೆಚ್ಚಿಸಿ ಅನುಕೂಲ ಮಾಡಿಕೊಡಬೇಕು ಎಂಬುದು, ಏಕೆಂದರೆ ಕಂಪನಿಯವರು ವೆಹಿಕಲ್ ತಯಾರು ಮಾಡುವುದಕ್ಕೆ ಲೈಸೆನ್ಸ್ ಪಡೆಯುವಾಗಲೇ 15–16 ಜನರಿಗೆ ಉಪಯೋಗವಾಗುವಂತೆ ಮಾಡಲು ಪಡೆದಿದ್ದಾರೆ. ವೆಹಿಕಲ್ ಕೆಪಾಸಿಟಿ 15 ಜನರಿಗಿದೆ. ಹೀಗಿರುವಾಗ 6 ಜನರಿಗೆ ರಿಸ್ಟ್ರಿಕ್ಟ್ ಮಾಡಿದರೆ ಯಾರೂ ವೆಹಿಕಲ್ ನಡೆಸುವುದಕ್ಕಾಗುವುದಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ತೀರ್ಮಾನಕ್ಕೆ ಬರುವುದು ಒಳ್ಳೆಯದು. 6+1 ಸೀಟಿಗೆ 250 ರೂಪಾಯಿ ತೆರಿಗೆ ಇದ್ದುದನ್ನು 1200 ರೂಪಾಯಿಗೆ ಹೆಚ್ಚು ಮಾಡಿದ್ದಾರೆ, ಇದು ಜಾಸ್ತಿ ಎಂಬುದು ವ್ಯಾನ್ ಮಾಲೀಕರ ಸಂಘದ ವಾದ ಸೀಟುಗಳ ಸಂಖ್ಯೆಹೆಚ್ಚು ಮಾಡಬೇಕು ಮತ್ತು ತೆರಿಗೆ ಕಡಿಮೆ ಮಾಡಬೇಕು ಎಂಬ ಎರಡು ಮುಖ್ಯ ಬೇಡಿಕೆಗಳನ್ನು ಅವರಿಟ್ಟಿದ್ದಾರೆ. ಕೆಎಸ್ಆರ್‌ಟಿಸಿ ಗೆ ನಷ್ಟವಾಗುವಂತೆ ಮಾಡಿ ಎಂದು ನಾನು ಹೇಳುತ್ತಿಲ್ಲ. ನಿಮ್ಮ ಸಂಸ್ಥೆಗೂ ನಷ್ಟವಾಗಬಾರದು, ಅವರೂ ಬದುಕಬೇಕು, ಪಬ್ಲಿಕ್‌ಗೂ ಉಪಯೋಗವಾಗಬೇಕು, ಆ ರೀತಿ ತೀರ್ಮಾನ ಮಾಡಿ. ಇಲ್ಲಿ ಕೆಲವು ಫೋಟೋಗಳಿವೆ. ಬಸ್ಸಿನ ಮೇಲೆ ಜನ ಕುಳಿತುಕೊಂಡು ಹೋಗುತ್ತಿರುವ ಫೋಟೋ ಇಲ್ಲಿದೆ. ಈ ತರಹ ಇರುವಾಗ ಜನರಿಗೆ ನಾವು ಸಹಾಯ ಮಾಡುತ್ತಿದ್ದೇವೆ ಎಂದು ಈ ಸಂಘದವರು ಹೇಳುತ್ತಿದ್ದಾರೆ.

ಅಧ್ಯಕ್ಷರು.—ಭಾಷಣ ಬೇಡ. ಕ್ಲಾರಿಫಿಕೇಷನ್ ಕೇಳಿ. ತಾವು ವಿರೋಧಪಕ್ಷದ ನಾಯಕರು ಎಂದು ಮಾತನಾಡಲು ಅವಕಾಶ ಕೊಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಆಗಲಿ. ಇನ್ನೊಂದು ವಿಚಾರ ಏನಂದರೆ, ಈ ವ್ಯಾನ್ ಮಾಲೀಕರಿಗೆ 10 ಸಾವಿರದಿಂದ 20 ಸಾವಿರದವರೆಗೆ ದಂಡ ಹಾಕಿದ್ದಾರೆ. ಎಂದು ಹೇಳುತ್ತಿದ್ದಾರೆ, ಇನ್ನೊಂದು ದಂಡ ಹಾಕಿದರೆ ಅವರು ವೆಹಿಕಲ್ ಮಾರಿಕೊಂಡು ಹೋಗುಬೇಕಾಗುತ್ತದೆ. ಆಗ ಕೆ.ಎಸ್.ಎಫ್.ಸಿಗೆ ಸಾಲವನ್ನೂ ವಾಪಸ್ ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ಆ ರೀತಿ ದಂಡ ಹಾಕಿದ್ದರೆ ಅದನ್ನು ವಸೂಲು ಮಾಡದಂತೆ ಅಧಿಕಾರಿಗಳಿಗೆ ತಿಳಿಸಿ.

(ಉತ್ತರ ಇಲ್ಲ)

ಅಧ್ಯಕ್ಷರು.—ಭೂಪತಿಯವರೇ, ತಮ್ಮ ಗಮನ ಸೆಳೆಯುವ ಸೂಚನೆಗೆ ಸವಿಸ್ತಾರವಾಗಿ ಉತ್ತರ ಕೊಡಬೇಕೆಂಬ ಉದ್ದೇಶದಿಂದ ಗೃಹಮಂತ್ರಿಗಳು ಕಾಲಾವಕಾಶ ಕೇಳಿದ್ದಾರೆ. ಅದು ಬಂದನಂತರ ಆ ವಿಚಾರ ತೆಗೆದುಕೊಳ್ಳುತ್ತೇನೆ.

ಶ್ರೀ ಯು. ಭೂಪತಿ.—ಇದು ಬಹಳ ಮಹತ್ವವಾದ ವಿಚಾರ.

ಅಧ್ಯಕ್ಷರು.—ಅದಕ್ಕೋಸರವೇ ವಿವರ ತರಿಸುತ್ತಿದ್ದಾರೆ, ನಿಮಗೆ ಅರ್ಧ ಉತ್ತರ ಬೇಕೋ ? ಅಥವಾ ಸವಿಸ್ತಾರವಾದ ಉತ್ತರ ಬೇಕೋ 3

ಶ್ರೀ ಎಂ. ಎಸ್. ಕೃಷ್ಣನ್.—ಇದು ಪೋಲೀಸ್ ಇಲಾಖೆಗೆ ಸಂಬಂಧಪಟ್ಟ ಪ್ರಶ್ನೆ.

ಶ್ರೀ ಯು. ಭೂಪತಿ.—ಮನುಷ್ಯ ಸತ್ತುಹೋಗಿದ್ದಾನೆ.

ಅಧ್ಯಕ್ಷರು.—ಗೃಹ ಮಂತ್ರಿಗಳು ಪತ್ರ ಬರೆದಿದ್ದಾರೆ, ಸವಿಸ್ತಾರವಾದ ವರದಿ ಸರಿಸಬೇಕಾಗಿರುವುದರಿಂದ ಕಾಲಾವಕಾಶ ಬೇಕು ಎಂದು ಹೇಳಿದ್ದಾರೆ. ಅದು ಬಂದನಂತರ ಸೋಮವಾರ ಅಥವಾ ಮಂಗಳವಾರ ತಮಗೆ ಅವಕಾಶ ಮಾಡಿಕೊಡುತ್ತೇನೆ.

ಗೈರುಹಾಜರಾಗಲು ಅನುಮತಿ

ಅಧ್ಯಕ್ಷರು.—ವಿಧಾನಸಭಾ ಸದಸ್ಯರಾದ ಕಲ್ಯಾಣರಾವ್ ಮೊಳಕೆರೆಯವರು ದಿನಾಂಕ 25ನೇ ಜುಲೈ 1985ರಿಂದ 10ನೇ ಆಗಸ್ಟ್ 1985ರವರೆಗೆ ವಿಧಾನಸಭೆಯ ಉಪವೇಶನಗಳಿಗೆ ಗೈರುಹಾಜರಾಗಲು ಅನುಮತಿ ಕೋರಿ ಪತ್ರ ಬರೆದಿದ್ದಾರೆ. ಅವರಿಗೆ ಗೈರುಹಾಜರಾಗಲು ಸದನ ಒಪ್ಪಿಗೆ ನೀಡುತ್ತದೆಯೆ ?

(ಸಭೆ ಒಪ್ಪಿಗೆ ನೀಡಿತು)

ಅಧ್ಯಕ್ಷರು.—ಶ್ರೀ ಕಲ್ಯಾಣರಾವ್ ಮೊಳಕೆರೆಯವರಿಗೆ ಗೈರುಹಾಜರಾಗಲು ಅನುಮತಿ ನೀಡಲಾಗಿದೆ.

ನಿಯಮ 334 ರ ಮೇರೆಗೆ

ವಿಷಯ.—ವಾಣಿವಿಲಾಸ ಸಕ್ಕರೆ ಕಾರ್ಖಾನೆ ಅದನ್ನು ಲೇ ಆಫ್ ಘೋಷಿಸಿರುವುದರಿಂದ ನೌಕರರು ಬೀದಿ ಪಾಲಾಗಿರುವುದು :